# ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 510

2) ಸದಸ್ಯರ ಹೆಸರು : ಶ್ರೀಮತಿ ಹೇಮಲತಾ ನಾಯಕ
(ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

3) ಉತ್ತರಿಸುವ ದಿನಾಂಕ : 20.08.2026

4) ಉತ್ತರಿಸುವ ಸಚಿವರು : ಗೃಹ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಸಂವಿಧಾನದ ಅನುಚ್ಛೇದ 371 (J) ರಡಿ ಕೊಪ್ಪಳ ಜಿಲ್ಲಾ ಪೊಲೀಸ್ ಘಟಕದಲ್ಲಿ ಜಾರಿಯಾಗಿರುವ ವ್ಯವಸ್ಥೆಯಲ್ಲಿನ ಲೋಪದೋಷಗಳು ಸರ್ಕಾರದ ಗಮನಕ್ಕೆ ಬಂದಿವೆಯೇ; ಅವುಗಳ ಬಗ್ಗೆ ಸ್ವೀಕರಿಸಿರುವ ಅರ್ಜಿಗಳು ಎಷ್ಟು ಮತ್ತು ಕೈಗೊಂಡ ಕ್ರಮವೇನು: | ಸಂವಿಧಾನದ ಅನುಚ್ಛೇದ 371 (ಜೆ) ರಡಿ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ 2013 ಜಾರಿಗೆ ಬಂದಿದ್ದು, ಅದರಲ್ಲಿ ಸರ್ಕಾರವು ದಿನಾಂಕ: 29.01.2014 ರಂದು ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) (ಸ್ಥಳೀಯ ವೃಂದಗಳ ರಚನೆ, ಹಂಚಿಕೆ ಮತ್ತು ವ್ಯಕ್ತಿಗಳ ವರ್ಗಾವಣೆ) ನಿಯಮಗಳು, 2013 ಅನ್ನು ಜಾರಿಗೆ ತಂದಿರುತ್ತದೆ. ಈ ನಿಯಮಗಳನ್ವಯ ಕೊಪ್ಪಳ ಜಿಲ್ಲೆಯಲ್ಲಿ ಅಧಿಸೂಚನೆ ಸಂಖ್ಯೆ: ಸಿಬ್ಬಂದಿ(1)/371(ಜೆ)/2013-14. ದಿನಾಂಕ: 10-02-2014 ರಲ್ಲಿ ಸ್ಥಳೀಯ ವೃಂದದ ಹುದ್ದೆಗಳನ್ನು ಗುರುತಿಸಿ ಅಧಿಸೂಚನೆ ಹೊರಡಿಸಲಾಗಿರುತ್ತದೆ. ಈ ಸ್ಥಳೀಯ ವೃಂದಕ್ಕೆ ಸೇರ್ಪಡೆಗೊಳ್ಳಲು ಇಚ್ಛಿಸುವ ಸಿಬ್ಬಂದಿಗಳಿಂದ ಇಚ್ಛಾ ಪತ್ರವನ್ನು ಸಹ ಪಡೆದು ಅದರ ಆಧಾರದ ಮೇಲೆ ಇಚ್ಛಾ ಪತ್ರ ಸಲ್ಲಿಸಿರುವ ಸಿಬ್ಬಂದಿಗಳನ್ನು ಸ್ಥಳೀಯ ವೃಂದದಲ್ಲಿ ಸೇರ್ಪಡೆಗೊಳಿಸಲಾಗಿರುತ್ತದೆ.<br><br>ಮಂಜೂರಾತಿ ಬಲದಲ್ಲಿ 80% & 20% ಹುದ್ದೆಗಳನ್ನು ಬೇರ್ಪಡಿಸಿದ ನಂತರ ಕೊಪ್ಪಳ ಜಿಲ್ಲಾ ಪೊಲೀಸ್ ಘಟಕದಲ್ಲಿನ ಎಲ್ಲಾ ವೃಂದದ ಹುದ್ದೆಗಳ ಸ್ಥಳೀಯ ಮತ್ತು ಸ್ಥಳೀಯೇತರ ವೃಂದದ ಜೇಷ್ಠತಾ ಪಟ್ಟಿಗಳನ್ನು ಪ್ರಕಟಿಸಲಾಗಿರುತ್ತದೆ. ಸದರಿ ಅವಧಿಯಲ್ಲಿ ಸ್ಥಳೀಯ ವೃಂದ ರಚನೆ ಕುರಿತಂತೆ ಯಾವುದೇ ಅರ್ಜಿಗಳು / ಆಕ್ಷೇಪಣೆಗಳು ಸ್ವೀಕೃತವಾಗದೇ ಇರುವುದರಿಂದ ಜೇಷ್ಠತಾ ಪಟ್ಟಿಗಳ ಅನುಗುಣವಾಗಿ ಮುಂಬಡ್ತಿ ನೀಡಲು ಕ್ರಮ ಕೈಗೊಳ್ಳಲಾಗಿರುತ್ತದೆ.<br><br>ತದನಂತರ ನಿಯೋಜನಾ ಮೀಸಲು ಹುದ್ದೆಗಳನ್ನು ಸಹ ನೇಮಕಾತಿ ಮುಂಬಡ್ತಿ ಮತ್ತು ಜೇಷ್ಠತೆಗಾಗಿ ಸದರಿ ಘಟಕದ ಮಂಜೂರಾತಿ ಬಲದಲ್ಲಿ ಸೇರ್ಪಡೆಗೊಳಿಸಿ ಹಂಚಿಕೆ ಮಾಡಿದ್ದರಿಂದ ಅಧಿಸೂಚಿತ ಹುದ್ದೆಗಳ ಪರಿಷ್ಕೃತ ಅಧಿಸೂಚನೆಯನ್ನು ಸಂಖ್ಯೆ: ಸಿಬ್ಬಂದಿ(1)/371(ಜೆ)/2018, ದಿನಾಂಕ: 25-01-2018 ರಂದು ಹೊರಡಿಸಲಾಗಿರುತ್ತದೆ. ಸ್ಥಳೀಯ ವೃಂದ ರಚನೆ ಹಾಗೂ ಜೇಷ್ಠತಾ ಪಟ್ಟಿ ಪ್ರಕಟಣೆ ಸಂದರ್ಭದಲ್ಲಿ ಯಾವುದೇ ಆಕ್ಷೇಪಣೆಗಳು ಸ್ವೀಕೃತವಾಗಿರುವುದಿಲ್ಲ. |
| ಆ) | 371 (J) ಅನುಷ್ಠಾನದ ಹಿನ್ನೆಲೆಯಲ್ಲಿ ಕೊಪ್ಪಳ ಜಿಲ್ಲಾ ಪೊಲೀಸ್ ಘಟಕದಲ್ಲಿ ಇಲಾಖಾವಾರು ಪ್ರತ್ಯೇಕ ಜೇಷ್ಠತಾ ಪಟ್ಟಿಗಳನ್ನು ಹೊರಡಿಸಲು ಸರ್ಕಾರ ಆದೇಶ ನೀಡಿದೆಯೇ; ನೀಡಿದ್ದರೆ, ಅದರ ಅನುಷ್ಠಾನದ ಸ್ಥಿತಿಯೇನು: | ಸರ್ಕಾರದ ಅಧಿಸೂಚನೆ-1 ಸಂಖ್ಯೆ ಡಿಪಿಎಆರ್ 43 ಹೆಚ್‌ಕೆಸಿ 2013 ದಿನಾಂಕ: 29-01-2014 ರಲ್ಲಿ ಅಧ್ಯಾಯ-3 ನಿಯಮ:4 ರಲ್ಲಿ ಮೀಸಲಾತಿ ಉದ್ದೇಶಕ್ಕಾಗಿ ರೋಸ್ಟರ್ ನ ನಿರ್ವಹಣೆ, ಮೂಲ ವೃಂದ ಮತ್ತು ಅದರಿಂದ ರೂಪಿಸಲಾದ ಸ್ಥಳೀಯ ವೃಂದವನ್ನು ನೌಕರಿ ಭರ್ತಿ, ನೇಮಕಾತಿ, ಜೇಷ್ಠತೆ, ಮುಂಬಡ್ತಿಯ ಉದ್ದೇಶಕ್ಕಾಗಿ ಮತ್ತು ಮೀಸಲಾತಿಯ ನಿರ್ವಹಣೆಗಾಗಿ ಒಂದು ಪ್ರತ್ಯೇಕ ಘಟಕವೆಂದು ಪರಿಗಣಿಸತಕ್ಕದ್ದು. ಎರಡು ಸಮಾನಾಂತರ ರೋಸ್ಟರ್ ಆವರ್ತನಗಳನ್ನು ಉಳಿದ ಮೂಲ ವೃಂದ ಮತ್ತು ಸ್ಥಳೀಯ ವೃಂದಕ್ಕಾಗಿ ಜಾರಿಗೊಳಿಸತಕ್ಕದ್ದು ಎಂಬುದಾಗಿ ಹಾಗೂ ಸರ್ಕಾರವು ಅಧಿಸೂಚನೆ ಸಂಖ್ಯೆ ಡಿಪಿಎಆರ್ 43 ಹೆಚ್‌ಕೆಸಿ 2013 ದಿನಾಂಕ: 29-01-2014 ರಲ್ಲಿ ಅಧ್ಯಾಯ 5 ನಿಯಮ-(7)ರಲ್ಲಿ ಜೇಷ್ಠತೆ ಮತ್ತು ಸಂಬಂಧಪಟ್ಟ ವಿಷಯಗಳ ಕುರಿತಂತೆ ಸಕ್ಷಮ ಪ್ರಾಧಿಕಾರವು ಪ್ರತಿಯೊಂದು ಸ್ಥಳೀಯ ವೃಂದದಲ್ಲಿ ಮತ್ತು ಉಳಿದ ಮೂಲ ವೃಂದದಲ್ಲಿ ಪ್ರತ್ಯೇಕ ಜೇಷ್ಠತೆಯನ್ನು ನಿರ್ವಹಿಸತಕ್ಕದ್ದು ಎಂದು ನಿರ್ದೇಶಿಸಿರುತ್ತದೆ. ಆದ್ದರಿಂದ ಕೊಪ್ಪಳ ಜಿಲ್ಲಾ ಪೊಲೀಸ್ ಘಟಕದಲ್ಲಿ ಸ್ಥಳೀಯ ವೃಂದ ಮತ್ತು ಉಳಿದ ಮೂಲ ವೃಂದ ಎಂದು ಎರಡು ಪ್ರತ್ಯೇಕ ಜೇಷ್ಠತೆಯನ್ನು ನಿರ್ವಹಿಸಲಾಗುತ್ತಿದೆ. |
| | | |

| | | |
|---|---|---|
| ಇ) | ಕೊಪ್ಪಳ ಜಿಲ್ಲಾ ನ್ಯಾಯಾಲಯದಲ್ಲಿ ಜೇಷ್ಠತಾ ಪಟ್ಟಿ ತಯಾರಿಸುವಾಗ ಅನುಸರಿಸಿದ ಕ್ರಮವನ್ನು ಪೊಲೀಸ್ ಇಲಾಖೆಯಲ್ಲಿ ಅನುಸರಿಸದಿರುವುದಕ್ಕೆ ಕಾರಣವೇನು; | ಪೊಲೀಸ್ ಇಲಾಖೆ ಮತ್ತು ನ್ಯಾಯಾಂಗ ಇಲಾಖೆಯಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳು ಪ್ರತ್ಯೇಕ ಇರುವುದರಿಂದ ಪೊಲೀಸ್ ಇಲಾಖೆಗೆ ಅನ್ವಯಿಸುವುದಿಲ್ಲ. ಕೊಪ್ಪಳ ಜಿಲ್ಲಾ ಪೊಲೀಸ್ ಘಟಕವು ಸರ್ಕಾರವು 371(ಜೆ) ಅನುಷ್ಠಾನ ಕುರಿತಂತೆ ದಿನಾಂಕ: 29.01.2014ರಂದು ಹೊರಡಿಸಿರುವ ನಿಯಮಗಳಲ್ಲಿನ ನಿರ್ದೇಶನಗಳನ್ವಯ ಕ್ರಮಗಳನ್ನು ಅನುಸರಿಸಲಾಗಿರುತ್ತದೆ. |
| ಈ) | ನ್ಯಾಯಾಂಗ ಇಲಾಖೆಯಲ್ಲಿ ಒಂದೇ ಜೇಷ್ಠತಾ ಪಟ್ಟಿ ಇದ್ದರೂ, ಪೊಲೀಸ್ ಇಲಾಖೆಯಲ್ಲಿ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳಾಗಿ ವಿಭಜಿಸಿ ಅಧಿಸೂಚನೆ ಹೊರಡಿಸಿರುವುದಕ್ಕೆ ಕಾರಣವೇನು; | ಸರ್ಕಾರವು ಅಧಿಸೂಚನೆ-1 ಸಂಖ್ಯೆ ಡಿಪಿಎಆರ್ 43 ಹೆಚ್‌ಕೆಸಿ 2013 ದಿನಾಂಕ: 29-01-2014 ರಲ್ಲಿ ಅಧ್ಯಾಯ 5 ನಿಯಮ-(7)ರಲ್ಲಿ ಜೇಷ್ಠತೆ ಮತ್ತು ಸಂಬಂಧಪಟ್ಟ ವಿಷಯಗಳ ಕುರಿತಂತೆ ಸಕ್ಷಮ ಪ್ರಾಧಿಕಾರವು ಪ್ರತಿಯೊಂದು ಸ್ಥಳೀಯ ವೃಂದದಲ್ಲಿ ಮತ್ತು ಉಳಿದ ಮೂಲ ವೃಂದದಲ್ಲಿ ಪ್ರತ್ಯೇಕ ಜೇಷ್ಠತೆಯನು ನಿರ್ವಹಿಸತಕ್ಕದ್ದು ಎಂದು ನಿರ್ದೇಶಿಸಿರುತ್ತದೆ. ಆದ್ದರಿಂದ ಸದರಿ ಸರ್ಕಾರದ ನಿಯಮಗಳನ್ನು ಪಾಲಿಸಲಾಗಿರುತ್ತದೆ. |
| ಉ) | 2014 ರಲ್ಲಿ ಜೇಷ್ಠತಾ ಪಟ್ಟಿ ಅಧಿಸೂಚಿಸುವ ಸಂದರ್ಭದಲ್ಲಿ ಸ್ಥಳೀಯ ವೃಂದದ ಹುದ್ದೆಗಳನ್ನು ಭರ್ತಿ ಮಾಡದೆ ಖಾಲಿ ಉಳಿಸಿರುವುದು ಹಾಗೂ ಆ ಅವಧಿಯಲ್ಲಿ ಬಡ್ತಿಗೆ ಅರ್ಹ ಸಿಬ್ಬಂದಿ ಲಭ್ಯವಿದ್ದರೂ ಬಡ್ತಿ ನೀಡದಿರುವುದು ನಿಜವೇ: | 371 (ಜೆ) ರಡಿಯಲ್ಲಿ (ಕಲ್ಯಾಣ-ಕರ್ನಾಟಕ) ಅನುಸಾರವಾಗಿ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದದಲ್ಲಿ ಪ್ರತ್ಯೇಕವಾಗಿ ಜೇಷ್ಠತಾ ಪಟ್ಟಿಗಳನ್ನು ಹೊರಡಿಸಿದ ನಂತರ ನಿಯಮಾನುಸಾರ ಸ್ಥಳೀಯ ವೃಂದದಲ್ಲಿ ಖಾಲಿ ಉಳಿದಿರುವ ಒಟ್ಟು 33 ಸಿಬ್ಬಂದಿಗಳಿಗೆ ಸಿಪಿಸಿ ಹುದ್ದೆಯಿಂದ ಸಿಹೆಚ್‌ಸಿ ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ ಹಾಗೂ 18 ಸಿಬ್ಬಂದಿಗಳಿಗೆ ಸಿ.ಹೆಚ್.ಸಿ ಹುದ್ದೆಯಿಂದ ಎಎಸ್‌ಐ ಹುದ್ದೆಗೆ ಮುಂಬಡ್ತಿ ನೀಡಲಾಗಿರುತ್ತದೆ. |
| ಊ) | ಸ್ಥಳೀಯ ವೃಂದದಲ್ಲಿ ಹುದ್ದೆಗಳನ್ನು ಭರ್ತಿ ಮಾಡಿರುವುದರಿಂದ ಕೊಪ್ಪಳ ಜಿಲ್ಲೆಯ ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶ ಕಡಿಮೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ? | 371(ಜೆ) ಜಾರಿಗೆ ಕುರಿತಂತೆ ಸರ್ಕಾರವು ನೀಡಿರುವ ನಿರ್ದೇಶನದನ್ವಯ ಸ್ಥಳೀಯ ಮತ್ತು ಮಿಕ್ಕುಳಿದ ವೃಂದಗಳನ್ನು ಪ್ರತ್ಯೇಕವಾಗಿ ಶೇಕಡಾವಾರು ಪ್ರಮಾಣದಲ್ಲಿ ಗುರುತಿಸಿ ಆಯಾ ವೃಂದಗಳಲ್ಲಿ ರಿಕ್ತವಾದ ಹುದ್ದೆಗಳಿಗೆ ಕಾಲ ಕಾಲಕ್ಕೆ ನೇರ ನೇಮಕಾತಿ ಮೂಲಕ ಭರ್ತಿ ಮಾಡಲಾಗುತ್ತದೆ. ಸ್ಥಳೀಯ ವೃಂದವನ್ನು ಪ್ರತ್ಯೇಕವಾಗಿ ಗುರುತಿಸಿರುವುದರಿಂದ ಸ್ಥಳೀಯ ಯುವಕರಿಗೆ ಉದ್ಯೋಗಾವಕಾಶ ಕಡಿಮೆಯಾಗಿರುವುದಿಲ್ಲ. |

ಹೆಚ್‌ಡಿ 307 ಪಿಹೆಚ್‌ಎಸ್ 2026

(ಪ್ರಿಯಾಂಕ್ ಖರ್ಗೆ)
ಗೃಹ ಸಚಿವರು